ಆಕೆಗೆ ಉಸಿರು ಕಟ್ಟಿದಂತಾಗಿ, ತನ್ನೆಲ್ಲ ಧೈರ್ಯ ಒಗ್ಗೂಡಿಸಿ ಎರಡೇ ಎರಡು ಶಬ್ದ ಉಸುರಿದಳು, ''ನಿನ್ನ ಹೆಂಡತಿ... ಓಡಿಹೋದಳು ಹೌದಲ್ಲೊ?'' ತಾನು ಊಹಿಸಿದ್ದೆಲ್ಲವೂ ನಿಜವಾದೆಂತೆನಿಸಿ, ಆತ ಹಲ್ಲು ಕಾಣಿಸುವಂತೆ ಇಷ್ಟಗಲ ಬಾಯ್ತೆರೆದು ಆ ವಾಕ್ಯವನ್ನು ತಾನೇ ಪೂರ್ಣಗೊಳಿಸಿದ.

''ಇಲ್ಲ, ಇಲ್ಲ, ಆಕೆ ಕೇವಲ ನೂರಪುರದಲ್ಲಿರುವ ತನ್ನ ಅಣ್ಣನ ಮನೆಗೆ ಹೋಗಿದ್ದಾಳೆ. ಕೆಲವೇ ದಿನಗಳಲ್ಲಿ ಮರಳಿ ಬರಲಿದ್ದಾಳೆ'' ಎಂದು ಆ ಮುದುಕಿ ಶಬ್ದಗಳನ್ನು ನುಂಗುತ್ತಲೇ ವಿವರಿಸಿದಳು. ಆತನ ಹೆಂಡತಿ ಓಡಿಹೋದದ್ದಕ್ಕೆ ತಾನೆ ಹೊಣೆಗಾರಳೇನೊ ಎಂಬ ಪಶ್ಚಾತ್ತಾಪದ ಉಸಿರು ಆಕೆಯ ದನಿಯಲ್ಲಿತ್ತು.

''ಏಯ್, ಹೋದರೆ ಹೋಗಲಿ ಬಿಡು'' ಎಂದು ಅವಳತ್ತ ಥಟ್ಟನೆ ಗುಡುಗಿ, ಧಡಾರನೆ ತನ್ನ ಮನೆಯ ಬಾಗಿಲು ತೆರೆದ. ತನ್ನ ಹೆಂಡತಿ ಇನ್ನೆಂದೂ ಮರಳಿ ಬರುವುದಿಲ್ಲ ಎಂಬುದು ಆತನಿಗೆ ಖಾತ್ರಿಯಾಗಿತ್ತು.

ಒಳಗೊಳಗೇ ಸಿಟ್ಟಿನಿಂದ ಕುದಿಯುತ್ತ, ಕತ್ತಲು ತುಂಬಿದ್ದ ತನ್ನ ಗುಡಿಸಲಿನೊಳಗೆ ಹೋಗಿ ಒಂದು ಚಾಪೆಯ ಮೇಲೆ ಕುಳಿತುಕೊಂಡ. ಒಂದು ಮೂಲೆಯಲ್ಲಿ ಬೆಕ್ಕು ಮೀಂವ್‌ಗುಡುತ್ತಿತ್ತು. ತನ್ನ ಸಿಟ್ಟನ್ನು ತೀರಿಸಿಕೊಳ್ಳಲು ಯಾರೂ ಸಿಗದಂತಾಗಿ, ಆ ಬೆಕ್ಕನ್ನು ಎತ್ತಿ ಹೊರಗೆ ಬೀಸಾಕಿ, ಧಡಾರನೆ ಬಾಗಿಲು ಮುಚ್ಚಿಕೊಂಡ.

ದೂಳು ಹಿಡಿದ ತನ್ನ ಕೈಕಾಲುಗಳನ್ನುತೊಳೆದುಕೊಳ್ಳಲು ನೀರು ಕೊಡುವವರಾರೂ ಅಲ್ಲಿರಲಿಲ್ಲ. ರಾತ್ರಿ ಊಟ ಬಡಿಸಲು ಯಾರೂ ಅಲ್ಲಿರಲಿಲ್ಲ. ತನ್ನ ಬೈಗುಳ ತಿಂದು, ಹೊಡೆಸಿಕೊಳ್ಳುವ ಯಾವ ವ್ಯಕ್ತಿಯೂ ಅಲ್ಲಿರಲಿಲ್ಲ. ರಹೀಮಖಾನ ವಿಚಲಿತನಾದ ಹಾಗೂ ವ್ಯಥಿತನಾದ. ಹೆಂಡತಿ ಮನೆಯಲ್ಲಿದ್ದಾಗ ತನ್ನ ಸಿಟ್ಟನ್ನೆಲ್ಲ ಅವಳ ಮೇಲೆ ಕಾರಿಕೊಳ್ಳುತ್ತಿದ್ದ. ಈಗ ಆಕೆ ಅಲ್ಲಿಲ್ಲದ್ದರಿಂದ ಆತನ ಸಿಟ್ಟು ಇನ್ನಷ್ಟು ಜಾಸ್ತಿಯಾಯಿತು.

''ಕೊನೆಗೂ ಆಕೆ ಹೋಗಿಯೇ ಬಿಟ್ಟಳು'' ಅಲ್ಲಿದ್ದ ಹೊರಸಲ ಮೇಲೆ ಒರಗಿ ಯೋಚಿಸತೊಡಗಿದ. ಆ ರಾತ್ರಿ ಊಟ ಮಾಡದೇ ಮಲಗಬೇಕೆಂದು ಆತ ನಿರ್ಧರಿಸಿದ್ದ. ಅವರಿಬ್ಬರು ಮದುವೆಯಾದ ನಂತರದ ಮೂವತ್ತು ವರ್ಷಗಳ ಕಾಲಾವಧಿಯಲ್ಲಿ, ಒಂದಿಲ್ಲೊಂದು ದಿನ, ಯಾವುದೇ ಕ್ಷಣದಲ್ಲಿ ಆಕೆ ತನ್ನನ್ನು ತೊರೆದು ಹೋಗುವಳೆಂದು ಆತನಿಗೆ ಯಾವಾಗಲೂ ಅನ್ನಿಸುತ್ತಿತ್ತು. ಆಕೆ ತನ್ನನ್ನು ತೊರೆದು ಹೋದರೆ ಹೋಗಲಿ ಎಂಬ ಇಚ್ಛೆ ಕೂಡ ಅವನದಾಗಿತ್ತು.

ಆರು ವರ್ಷಗಳ ಹಿಂದೆ, ಹಿರಿಯ ಮಗ ಬಂಡು ಆತನ ಅಸಹನೀಯ ಹೊಡೆತ ತಾಳಲಾರದೆ ಮನೆ ಬಿಟ್ಟು ಓಡಿಹೋಗಿದ್ದ. ಅದಾಗಿ ಮೂರು ವರ್ಷಗಳ ನಂತರ ಕಿರಿಯ ಮಗ ನೂರಲ್ಲನೂ ಕೂಡ ತನ್ನ ಅಣ್ಣನ ಹಾದಿಯನ್ನೇ ಹಿಡಿದು ಹೋದ. ಆ ದಿನದಿಂದಲೇ, ತನ್ನ ಹೆಂಡತಿ ಕೂಡ ಅಣ್ಣನ ಮನೆಗೆ ಓಡಿ ಹೋಗುವುದು ನಿಶ್ಚಿತ ಎಂದು ಆತನ ಮನಸ್ಸು ಹೇಳುತ್ತಿತ್ತು. ಆದರೆ, ಇದೀಗ ಅವಳು ಹೊರಟು ಹೋಗಿದ್ದಕ್ಕೆ ಆತ ಖಿನ್ನನಾಗಿರಲಿಲ್ಲ. ಆದರೆ ಅವಳಿಲ್ಲದ್ದಕ್ಕೆ, ಫರ್ನಿಚರ್‌ನ ಒಂದು ತುಂಡು ಕಳಚಿ ಹೋದಂತೆನಿಸಿ,ಆತ ಒಂದಿಷ್ಟು ಗಲಿಬಿಲಿಗೊಂಡಿದ್ದ. ಅವಳು ಮನೆ ಬಿಟ್ಟು ಹೋದ ಮೇಲೆ ತನ್ನ ಮನದಾಳದಿಂದ ಕ್ಷಣಕ್ಷಣವೂ ಹೊರಸೂಸುವ ಕಹಿಯನ್ನೆಲ್ಲ ಈಗ ಅವನು ಯಾರ ಮೇಲೆ ಕಾರಿಕೊಳ್ಳಬೇಕು?.

ಕಳೆದ ಮೂವತ್ತು ವರ್ಷಗಳ ಕಾಲಾವಧಿಯಲ್ಲಿ, ತನ್ನ ಮನೆಯವರ, ಸಮಾಜ ಹಾಗೂ